**<u>ದಿನಾಂಕಃ 03.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ. ಕೆ ಟಿ ಟಿ ವಕೀಲರಿಂದಃ-</u>

ನಾನು ಈ ಪ್ರಸುತ್ತ ದಾವೆಯನ್ನು ಸಲ್ಲಿಸುವ ಪೂರ್ವದಲ್ಲೆ ನಿಪಿ-4ರಂತೆ ಪ್ರತಿವಾದಿಗೆ ನೋಟೀಸ್ ಕಳುಹಿಸಿದ್ದೆ ಎಂದರೆ ಸರಿ. ಸದರಿ ನಿಪಿ-4 ನೋಟೀಸ್ ನಲ್ಲಿ ಬರೆದಿರುವ ಅಂಶಗಳನ್ನು ವಕೀಲರಿಗೆ ನಾನೇ ಹೇಳಿ ಬರೆಸಿದ್ದೆ ಎಂದರೆ ಸರಿ. ನಾನು ದಾವಾ ಪತ್ರ ತಯಾರು ಮಾಡಿಸುವ ಕಾಲಕ್ಕೆ ನಿಪಿ-4 ನೋಟೀಸ್ ನಲ್ಲಿ ಇರುವ ಅಂಶಗಳನ್ನು ತಿಳಿದು ದಾವಾ ಪತ್ರ ತಯಾರು ಮಾಡಿಸಿದ್ದೇನೆ ಎಂದರೆ ಸರಿ. ದಾವಾ ಪತ್ರದಲ್ಲಿರುವ ಅಂಶಗಳ ಆಧಾರದ ಮೇಲೆ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತಯಾರು ಮಾಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿ. ನಿಪಿ-4 ನೋಟೀಸ್ ನಲ್ಲಿ, ಮೂಲ ದಾವಾಪತ್ರದಲ್ಲಿ ಮತ್ತು ನನ್ನ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯ ಗಂಡ ಶಿವಕುಮಾರ ಎರಡು ತಿಂಗಳು ಬಿಟ್ಟು ನನಗೆ ಹಣವನ್ನು ಕೊಡುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ನಮ್ಮ ವಕೀಲರಿಗೆ ಹೇಳಿದ್ದೇನೆ. ದಾವಾ ಪತ್ರಕ್ಕೆ ಮತ್ತು ತಮ್ಮ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ತಾವು ತಮ್ಮ ಸಹಿಯನ್ನು ಮಾಡುವ ಪೂರ್ವದಲ್ಲಿ ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಾವಾ ಪತ್ರಕ್ಕೆ ಓದಿ ಸಹಿ ಮಾಡಿರುತ್ತೇನೆ ಎಂದು ಈ ಮೇಲೆ ಹೇಳಿದ್ದು ತಾವು ಸಹಿ ಮಾಡುವಾಗ ಎರಡು ತಿಂಗಳ ಅವದಿಗೆ ಹಣ ಕೊಟ್ಟಿಲ್ಲ ಎಂಬ ವಿಚಾರವನ್ನು ತಮ್ಮ ವಕೀಲರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಮರೆತಿದ್ದೇನೆ. ತಾವು ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ಸಹಿ ಮಾಡುವ ಕಾಲಕ್ಕೆ ಎರಡು ತಿಂಗಳ ಅವದಿಯ ಮರುಪಾವತಿಯ ಬಗ್ಗೆ ವಿಚಾರ ನಮೂದು ಇಲ್ಲ ಎಂದು ವಕೀಲರಿಗೆ ಹೇಳಿಲ್ಲ ಎಂದರೆ ಸರಿ. ಪ್ರತಿವಾದಿಯ ಗಂಡ ಎರಡು ತಿಂಗಳಲ್ಲಿ ಹಣವನ್ನು ಮರುಪಾವತಿ ಮಾಡುವುದಾಗಿ ಕೊಟ್ಟಿದ್ದರು ಎಂದು ತೋರಿಸಲು ತಮ್ಮ ಬಳಿ ಏನಾದರೂ ದಾಖಲೆಗಳು ಇದೆಯಾ ಎಂದರೆ ಸಾಕ್ಷಿ ಚೆಕ್ ಅನ್ನು ಹೊರತುಪಡಿಸಿ ಬೇರೆ ದಾಖಲೆ ಇಲ್ಲ ಎನ್ನುತ್ತಾರೆ. ನಾನು ತಮ್ಮನ್ನು ಮೊದಲ ಬಾರಿಗೆ ಪಾಟೀ ಸವಾಲಿಗೆ ಒಳಪಡಿಸಿದಾಗ ತಮ್ಮ ತಪ್ಪು ಅರಿವಾಗಿ ತಿದ್ದುಪಡಿ ದಾವಾ ಪತ್ರದ ಮೂಲಕ ಎರಡು ತಿಂಗಳ

ಅವದಿಗೆ ಸಾಲವನ್ನು ಮರುಪಾವತಿ ಮಾಡುವುದಾಗಿ ಪ್ರತಿವಾದಿಯ ಗಂಡ ಒಪ್ಪಿ ಕೊಂಡಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಾಟೀ ಸವಾಲಿಗೆ ಒಳಪಡಿಸಿಕೊಂಡಾಗ ನಾನು ಸಲ್ಲಿಸಿದ ದಾವೆಯು ಊರ್ಜಿತವಾಗುವುದಿಲ್ಲವೆಂದು ತಿಳಿದು ನಾನು ತಿದ್ದುಪಡಿ ದಾವಾ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಶಿವಕುಮಾರ್ ರವರ ಕುಟುಂಬಳ್ದರಿಂದ ಓಗಾದರೂ ಮಾಡಿ ಅಕ್ರಮ ಹಣ ಪಡೆಯಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ

ನ್ಯಾಯಾಲಯ, ಚನ್ನಪಟ್ಟಣ